17. ಬೆಂಗಳೂರು-ತುಮಕೂರು ರೋಡ್ 13ನೆ ಮೈಲಿಯಿಂದ ನೆಲಮಂಗಲ ತಾಲ್ಲೂಕು ರಾವುತನಹಳ್ಳಿಗೆ ರಸ್ತೆ ಮಾಡಿಸ ಬೇಕೆಂಬ ವಿಷಯದಲ್ಲಿ ದೊಡ್ಡಬಳ್ಳಾಪುರ ಸಬ್ ಡಿವಿಜನ್ ಆಫಿಸರವರಿಂದ ಬಂದ 18—5—09ನೆ ನಂಬ್ರಕ್ಕೂ 1471ನೆ ನಂಬರು ಯಾದಿ ಓದಲಾಯಿತು.

ರಸ್ತೆ ಮಾಡಲು ಮಂಜೂರ್ಮಾಡಲಾಯಿತು. ಆದರೆ ಇದಕ್ಕಾಗಿ ತಗಲಬಹುದಾದ ಲಾಗವಡಿಗೆ ಬೆಂಗಳೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜಿನಿಯರ್ ಯವರಿಂದ ಒಂದು ಅಂದಾಜು ತರಿಸಬೇಕೆಂದು ತೀರ್ಮಾನಿಸಲಾಯಿತು.

ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್ ಆಗಸ್ಟ್ ಮಾಹೆ 7ನೆ ತಾರೀಖಿನಲ್ಲಿ ನಡೆಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟಿನಲ್ಲಿ ಮಂಜೂರಾಗದ ಕಾಮಗಾರಿಗೆ ಅಂದಾಜು ಲೀಪ್ಯು.

ಡಿಸ್ಟ್ರಿಕ್ಟ್ ಫಂಡು ಕಾಮಗಾರಿಗಳು.

		ರೂ.	ಆ.	ಪೈ.
ನೆಲಮಂಗಲ ತಾಲ್ಲೂಕು ಬೇಗೂರು ರೋಡು ರಿಪೇರಿ ಮಾಡುವದಕ್ಕೆ		86	0	0
ಬೆಂಗಳೂರು ತಾಲ್ಲೂಕು ವೈಟ್‌ಫೀಲ್ಡ್ ಸೆಟ್ಲರ್ಸಿಗಾಗಿ ಹಂಗಾಮಿ ಭಾವಿ ತೆಗಿಯುವದು. ...		50	0	0
ಕೋಲ್ಸ್‌ಪೇಟೆ ಸಬ್ ತಾ॥ ಚನ್ನೇನಹಳ್ಳಿ ಸೀನೀರು ಬಾವಿ ಕಾವುಗಾರಿ ಮಾಡುವದಕ್ಕೆ ...		394	0	0

31—10—03ನೆ ನಂಬ್ರಕ್ಕೂ 2541-51—Agri. 64-08-3ನೆ ನಂಬರು ಪ್ರೊ॥ ಪ್ರಕಾರ ಮಂಜೂರಾದ ಲೋಕಲ್ ಫಂಡ್ ಜನರಲ್ ಸ್ಪೆಷಿಯಲ್ ಗ್ರ್ಯಾಂಟ್ ಕಾಮಗಾರಿಗಳು.

				ರೂ.	ಆ.	ಪೈ.
1.	ಕಾಕೋಳುಕೆರೆ ಅಂಗಳದಲ್ಲಿರುವ ಮರಳ ಭಾವಿ ಆಳಪಡಿಸುವ ಅಂದಾಜ		...	21	1	6
2.	ದೊಡ್ಡಬಳ್ಳಾಪುರ ತಾಲ್ಲೂಕು ಮೂರಸಂದ್ರದಲ್ಲಿ ಭಾವಿ ತೆಗಿಸುವದು		...	55	0	0
3.	ಡಿಟೋ	ರಾಮದೇವನಹಳ್ಳಿಯಲ್ಲಿ ಭಾವಿ ತೆಗಿಸುವದು	...	64	0	0
4.	ಬೆಂಗಳೂರು ತಾಲ್ಲೂಕು ಚಿಲ್ಲಹಳ್ಳಿಯಲ್ಲಿ ಭಾವಿ ತೆಗಿಸಲು ರಿವೈಜ್ ಅಂದಾಜ (ಬರಿಜನಲ್ ಅಂದಾಜ 285)		... ...	450	0	0
5.	ದೇವನಹಳ್ಳಿ ತಾ॥ ಕಾಯಂಗುತ್ತಾ ಬ್ಯಾಲಹಳ್ಳಿ ಚೌಕಭಾವಿಯಿಂದ ಹೂಳು ತೆಗಿಯುವದಕ್ಕೆ		...	15	0	0
6.	ಡಿಟೋ	ಬ್ಯಾಡರಹಳ್ಳಿ ಹೊಲೇರಿಗಾಗಿ ಹಂಗಾಮಿ ಭಾವಿ ತೆಗಿಸುವದಕ್ಕೆ	...	10	0	0
7.	ಡಿಟೋ	ಗೊಲ್ಲಹಳ್ಳಿ	ಡಿಟೋ ...	10	0	0
8.	ಡಿಟೋ	ಬ್ಯಾಡರಹಳ್ಳಿ ಮಾದಿಗರಿಗಾಗಿ	ಡಿಟೋ ...	10	0	0
9.	ಡಿಟೋ	ಗೋಕರೆ ಗ್ರಾಮದಲ್ಲಿ	ಡಿಟೋ ...	9	15	7
10.	ಡಿಟೋ	ಗಾರೆಹೊಸಹಳ್ಳಿ	ಡಿಟೋ ...	9	12	5
11.	ಡಿಟೋ	ಭೂವನಹಳ್ಳಿ ರಾಜಭಾವಿ ರಿಪೇರಿಗಾಗಿ	...	15	0	0
12.	ನೆಲಮಂಗಲ ತಾ॥ ದೊಡ್ಡಬೆಲೆ ಈಶ್ವರ ದೇವಸ್ಥಾನದ ಬಳಿ ಭಾವಿ ರಿಪೇರಿಗಾಗಿ ರಿವೈಜ್ ಅಂದಾಜ (ಬರಿಜನಲ್ ಅಂದಾಜ 250)		... ...	411	0	0

ಬಿ. ಜೆ. ಕುಮಾರಸ್ವಾಮಿ ನಾಯಿಕ್, ಪ್ರೆಸಿಡೆಂಟ್.

ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಸಾಹೇಬರವರ ಆಫೀಸ್.

ನೋಟಿಸ್.

ತಾರೀಖು 23ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ತುರುವೇಕೆರೆ 3ನೆ ಕ್ಲಾಸು ಟ್ರಾವರ್ಸ್ ಬಂಗ್ಲಾ ಹಾಲಿ ರಿಪೇರಿ ಆಗುತ್ತಲಿರುವದರಿಂದ ಮತ್ತೊಂದು ನೋಟಿಸ್ ಕೊಡುವ ವರಿಗೂ ಪ್ರಯಾಣಸ್ಥರಿಗೆ ಅಲ್ಲಿ ಇಳಿದುಕೊಳ್ಳಲು ಅವಕಾಶವಿಲ್ಲಾ.

ಸಿ. ವೆಂಕಟರಾವ್, ಫಾರ್ ಪ್ರೆಸಿಡೆಂಟ್.

ಶಿವೆಯೊಗ್ಗ ಡಿಸ್ಟ್ರಿಕ್ಟ್.

ತಾರೀಖು 9ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ :—ಸ್ಯ 1909ನೆ ಜುಲೈ ಒಂದನೆ ತಾರೀಖು ಲಾಗಾಯಿತು 1910ನೆ ಜೂನ್ ಆಖೈರ್ ವರಿವಿಗೆ ಶಿಕಾರಿಪುರ ಟವ್ನ ಮ್ಯುನಸಿಪಲ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿ ವಸ್ತ್ರೆರೆಗಳಮೇಲೆ ಟೋಲ್ ವಸೂಲ್ ಮಾಡತಕ್ಕ ಹಕ್ಕನ್ನು 1909ನೆ ಜೂನ್ ಮಾಹೆ ತಾರೀಖು 23ನೆ ಮೆಧ್ಯಾಹ್ನದಲ್ಲಿ ಶಿಕಾರಿಪುರ ತಾಲ್ಲೂಕ್ ಕಛೇರಿಯಲ್ಲಿ ಅ ಮಲ್ದಾರ್ ಮತ್ತು ಶಿಕಾರಿಪುರ ಟವ್ನ ಮ್ಯುನಸಿಪಲ್ ವೈಸ್ ಪ್ರೆಸಿಡೆಂಟರಿಂದ ಬಹಿರಂಗವಾಗಿ ಹರಾಜು ಹಾಕಿಸಲ್ಪಡುತ್ತೆ.

ಹೆಚ್ಚಿನ ಸಂಗತಿಗಳಿಗೆ ತಾರೀಖು 17ನೆ ಮಕ್ರ್ಯಂ ಮೈಸೂರು ಗೆಜೆಟ್ಟಿನ 2ನೆ ಭಾಗದ 512, 513ನೆ ಪೇಜಿನಲ್ಲಿ ಪಾಯಿಷ್ ಆಗಿರುವದನ್ನು ನೋಡಬೇಕು.

ಎ. ಮೃತ್ಯುಂಜಯ ಅಯ್ಯರ್,
ಫಾರ್ ಪ್ರೆಸಿಡೆಂಟ್.